


ಹೊರತೆಗೆಯುತ್ತಿದ್ದಾರೆ ಪೋಲಿಸರು ಎಂದು ಗೊತ್ತಾದಾಗ ಆ ಪೋಸ್ಟ್‌ಗೆ ಲೈಕ್ ಮಾಡಿ, ಕಾಮೆಂಟ್ ಹಾಕಿದ ಮಿತ್ರನೊಬ್ಬ ಹಲವು ರಾತ್ರಿ ನಿದ್ದೆ ಮಾಡಲಾಗಲಿಲ್ಲ. ಯಾವ ಹೊತ್ತಿನಲ್ಲಿ ಪೋಲಿಸರು ಮನೆಯ ಬಾಗಿಲು ಬಡಿಯುತ್ತಾರೋ ಎಂಬ ಆತಂಕ ಅವನನ್ನು ಕಾಡುತ್ತಿತ್ತು. ಆ ಸುದ್ದಿ ಪೂರಾ ತಣ್ಣಗಾದ ಮೇಲೆಯೇ ಅವನು ನಿರಾಳವಾಗಿದ್ದು.

ಯಾವುದೋ ಶಾಂಪುವಿನದ್ದೋ, ಸೋಪಿನದ್ದೋ ಜಾಹಿರಾತು. ಅದನ್ನು ಉಪಯೋಗಿಸಿ ಫೋಟೋ ತೆಗೆದುಕೊಂಡು ಅಂತರ್ಜಾಲದಲ್ಲಿ ಹಾಕಿದ್ದಕ್ಕೆ ಲೈಕುಗಳ ಮಹಾಪೂರ. 'ಅಮ್ಮಾ ನೋಡಿಲ್ಲಿ, ಒಂದು ಗಂಟೆಯೊಳಗೆ ಇನ್ನೂರೈವತ್ತು ಲೈಕುಗಳು' ಎಂಬ ಮಗಳ ಉದ್ಗಾರ. ಈ ಜಾಹಿರಾತನ್ನು ನೋಡಿ ನಮ್ಮ ಫೋಟೋಗಳಿಗೆ ಲೈಕುಗಳು ಬರಲೆಂದು ಆ ಸುಡುಗಾಡು ಶಾಂಪುವನ್ನೋ, ಸೋಪನ್ನೋ ಕೊಳ್ಳಬೇಕು ಟೀವಿ ವೀಕ್ಷಕರು! ಇದರ ಹುನ್ನಾರವನ್ನು ಅರಿಯದ ಮಕ್ಕಳು ಆ ವಸ್ತುವಿಗಾಗಿ ಹಟ ಹಿಡಿದರೂ ಆಶ್ಚರ್ಯವಿಲ್ಲ.

ನಾವು ಯಾವುದಾದರೂ ಒಂದು ವಿಷಯವನ್ನು, ಉದಾಹರಣೆಗೆ ಪ್ರತಿಲಿಪಿಯಲ್ಲಿನ ನಮ್ಮ ಕಥೆ/ಪ್ರಬಂಧ ಇತ್ಯಾದಿ, ಲಿಂಕ್ ಮೂಲಕ ಹಂಚಿಕೊಂಡಾಗ ಫೇಸ್‌ಬುಕ್‌ನಲ್ಲಿ ಬಹಳಷ್ಟು ಜನ ಲೈಕ್ ಮಾಡಿರುತ್ತಾರೆ. ನಾವು ಬಹಳ ಸಂತೋಷದಿಂದ ಪ್ರತಿಲಿಪಿ ತೆರೆದು ನೋಡಿದರೆ ಅಲ್ಲಿ ಈ ಯಾರ ಮೆಚ್ಚುಗೆಯೂ ಇರುವುದೇ ಇಲ್ಲ. ಕಥೆ/ಹಾಸ್ಯಬರಹ ಇತ್ಯಾದಿ ಸ್ಪರ್ಧೆಗಳಲ್ಲಿನ ನಮ್ಮ ಬರಹಗಳನ್ನು ಹೆಚ್ಚು ಜನ ಓದಿ ಪ್ರತಿಕ್ರಿಯೆ ಬರೆದರೆ ಬಹುಮಾನ ಬಂದೀತು ಎಂಬ ಆಸೆಯಿಂದ ಅಲ್ಲಿ ಹಾಕಿರುತ್ತೇವೆ. ಆದರೆ ಅಲ್ಲಿ ಲೈಕ್ ಮಾಡಿದವರು ಬಹುಷಃ ಲಿಂಕ್ ಓಪನ್ ಮಾಡದೆಯೇ ಹಾಗೆಯೇ ಲೈಕ್ ಮಾಡಿಬಿಟ್ಟಿರುತ್ತಾರೆ! ನಮ್ಮ ಉದ್ದೇಶವೇ ವಿಫಲವಾಗಿಬಿಡುತ್ತದೆ. ಈ ರೀತಿಯ ಅನುಭವ ಹಲವರದ್ದೂ ಹೌದು.

ಯಾರೋ ರಾಜಕೀಯದವರದ್ದೋ, ಸಿನಿಮಾ ನಟ ನಟಿಯರದ್ದೋ ಹುಟ್ಟುಹಬ್ಬ ಇದ್ದಾಗ ಅವರಿಗೆ ಶುಭಹಾರೈಸಿ ಎನ್ನುವ ಮೆಸೇಜುಗಳು ಹರಿದಾಡುತ್ತವೆ. ಅದನ್ನು ನೋಡಿದವರೆಲ್ಲಾ ವಿಶ್ ಮಾಡಿದ್ದೇ ಮಾಡಿದ್ದು. ಇವರ ಶುಭಹಾರೈಕೆಗಳನ್ನು ಆ ವ್ಯಕ್ತಿಗಳು ನೋಡುವುದು ಸಾಧ್ಯವೇ? ಶುಭ ಹಾರೈಸಿದವರಿಗೆ ಇಂಟರ್ನೆಟ್ ಖರ್ಚಾಗಿದ್ದೇ ಬಂತು ಭಾಗ್ಯ. ಇನ್ನು ಯಾರೋ ನಿಧನರಾದರು ಎಂದಿಟ್ಟುಕೊಳ್ಳಿ, ಸಿಕ್ ಸಿಕ್ಕವರೆಲ್ಲಾ ರಿಪ್ ಹಾಕಿದ್ದೇ ಹಾಕಿದ್ದು. ಅದೆಲ್ಲಾ ನಿಜವಾಗಿ ಆ ವ್ಯಕ್ತಿಗೆ ತಲುಪೋ ಹಾಗಿದ್ದರೆ ಆತ ಸೀದಾ ಸ್ವರ್ಗಕ್ಕೇ ಹೋಗಬೇಕು!

'ಈ ಮಗು ರೈಲ್ವೇ ಸ್ಟೇಷನ್ನಿನಲ್ಲಿ ಸಿಕ್ಕಿದೆ. ಇದು ಅವರ ಅಪ್ಪ ಅಮ್ಮನನ್ನು ಸೇರಿಕೊಳ್ಳುವವರೆಗೆ ಶೇರ್ ಮಾಡಿ ಸ್ನೇಹಿತರೆ' ಎಂಬ ಪೋಸ್ಟ್‌ಗಳು ಆಗಾಗ್ಗೆ ಬರುವುದುಂಟು. ಎಂದೋ ಹಾಕಿದ ಆ ಪೋಸ್ಟನ್ನು ನಿರಂತರವಾಗಿ ಹಂಚಿಕೊಳ್ಳುತ್ತಲೇ ಇರುತ್ತಾರೆ. ಹಾಕಿದವರಿಗೇ ತಿರುತಿರುಗಿ ಅದು ಬರುತ್ತಿರುತ್ತದೆ. ಪಾಪ ಅವರು ಮತ್ತೆ ಹಂಚುತ್ತಾರೆ. ಆ ವೇಳೆಗಾಗಲೇ ಆ ಮಗುವಿಗೆ ಮದುವೆಯೂ ಆಗಿ ಅದಕ್ಕೊಂದು ಮಗು ಆಗಿರುವ ಸಾಧ್ಯತೆಯೂ ಉಂಟು!

ಬಹಳ ಹಿಂದೆ, ಅಂದರೆ ಇಂಟರ್‌ನೆಟ್ ಇಲ್ಲದ ಕಾಲದಲ್ಲಿ, ಮನೆಗಳಿಗೆ ಒಂದು ಪೋಸ್ಟ್ ಕಾರ್ಡ್ ಬರುತ್ತಿತ್ತು. 'ಇದರಲ್ಲಿರುವ ವಿಷಯವನ್ನು ನೀವು ಇಪ್ಪತ್ತು ಜನರಿಗೆ ಕಳಿಸಿದರೆ ನಿಮಗೆ ಒಳ್ಳೆಯದಾಗುತ್ತದೆ. ಕಳಿಸದೆ ಉದಾಸೀನ ಮಾಡಿದವರಿಗೆ, ನೋಡಿ ಏನೆಲ್ಲಾ ತೊಂದರೆಯಾಗಿದೆ' ಎಂದು ಅದರಲ್ಲಿ ಬರೆದಿರುತ್ತಿತ್ತು. ಲಾಭವಾಗಲೆಂಬ ಆಸೆ ಮತ್ತು ಕೆಡುಕಾದರೆ ಎಂಬ ಭಯದಿಂದ ಕೆಲವರಾದರೂ ಅದನ್ನು ಇಪ್ಪತ್ತು ಜನಕ್ಕೆ ಕಳಿಸುತ್ತಿದ್ದರು. ಉದ್ಧಾರವಾಗುತ್ತಿದ್ದುದು ಪೋಸ್ಟ್ ಆಫೀಸ್‌ನವರು! ಈಗ ಹೈಟೆಕ್ ಯುಗ ಅಲ್ಲವೇ? ಫೇಸ್‌ಬುಕ್‌ನಲ್ಲಿ ದೇವರ ಚಿತ್ರಗಳು ಬರುತ್ತವೆ. 'ಇದನ್ನು ಐದು ಸೆಕೆಂಡಿನಲ್ಲೋ, ಹತ್ತು ಸೆಕೆಂಡಿನಲ್ಲೋ ಲೈಕು ಮಾಡಿ, ಹಂಚಿಕೊಂಡು, ನಿಮಗೆ ಏನಾಗುತ್ತದೆ ನೋಡಿ' ಎಂಬ ಬರಹವೂ ಅದರ ಜೊತೆಗೆ ಇರುತ್ತದೆ. ಆಗಲೇ ಹೇಳಿದಂತೆ ಕೆಲವರಾದರೂ ಅದನ್ನು ಮುಂದೆ ಕಳಿಸಿಯೇ ತೀರುತ್ತಾರೆ!

ನಿಮ್ಮ ಪೋಸ್ಟನ್ನು ಒಂದು ಸಾವಿರ ಮಂದಿ ಲೈಕು ಮಾಡಿದ್ದಾರೆ, ಇಲ್ಲಿ ಮತ್ತೆ ಏನಾದರೂ ಬರೆಯಿರಿ, ಏನನ್ನಾದರೂ ಹಂಚಿಕೊಳ್ಳಿ ಎಂದು ಅಂತರ್ಜಾಲ ನಿರ್ವಾಹಕ ಕಂಪನಿಗಳು ಪ್ರೇರೇಪಿಸುತ್ತವೆ. ಲಾಭವಾಗುವುದು ಅಂತರ್ಜಾಲ ಸೇವೆ ನೀಡುವ ಕಂಪನಿಗಳಿಗೆ ಮಾತ್ರ. ನಮಗೆ ಸಿಗುವುದು ಒಂದು ಭ್ರಮಾಧಾರಿತ ಹೆಮ್ಮೆ! ಮುಂದೆ ಇದು ಮೇಲಿಂದ ಮೇಲೆ ಅಂತರ್ಜಾಲಕ್ಕೆ ಶರಣು ಹೋಗುವ ಗೀಳಿಗೆ ಕಾರಣವಾದರೆ ಆಶ್ಚರ್ಯವಿಲ್ಲ. ಕೆಲವು ಮಕ್ಕಳಂತೂ ತಮ್ಮ ಪೋಸ್ಟ್‌ಗಳಿಗೆ ನಿರೀಕ್ಷಿತ ಮಟ್ಟದಲ್ಲಿ ಲೈಕುಗಳು ಬರಲಿಲ್ಲ ಎಂದು ಖಿನ್ನತೆಗೆ ಒಳಗಾದ ನಿದರ್ಶನಗಳು ಹಲವಾರಿವೆ. ಒಂದು ಮಿತಿಯಲ್ಲಿದ್ದರೆ ಇದು ನಮ್ಮ, ಅದರಲ್ಲೂ ಹಿರಿಯ ನಾಗರಿಕರ, ಮಾನಸಿಕ ಆರೋಗ್ಯಕ್ಕೆ ಒಳ್ಳೆಯದೆಂದು ಹೇಳುವವರೂ ಉಂಟು. ಅದೆಷ್ಟು ಮಟ್ಟಿಗೆ ನಿಜವೋ ತಿಳಿಯದು.

ಈ ಲೈಕುಗಳ ಲೋಕವೇ ವಿಚಿತ್ರ ಅನ್ನಿಸುತ್ತದೆ. ಏನಂದುಕೊಳ್ಳುತ್ತಾರೋ ಎಂಬ ದಾಕ್ಷಿಣ್ಯಕ್ಕೆ ಲೈಕು ಮಾಡುವವರು, ಮುಖಸ್ತುತಿಗಾಗಿ ಲೈಕು ಮಾಡುವವರು, ನಿಜವಾಗಿ ಮೆಚ್ಚಿ ಲೈಕು ಮಾಡುವವರು ಯಾರು ಎನ್ನುವುದನ್ನು ಬೇರ್ಪಡಿಸುವ ಕೆಲಸ ಬಹಳ ಕಷ್ಟದ್ದು. ಕಷ್ಟದ್ದೇನು ಬಹುಷಃ ಅಸಾಧ್ಯವೇನೋ! ಯಾಕೆಂದರೆ ಫೇಸ್‌ಬುಕ್ ಉಪಯೋಗಿಸುವ ಎಲ್ಲರೂ ಈ ಎಲ್ಲಾ ರೀತಿಯ ಲೈಕುಗಳನ್ನು ಒಂದಲ್ಲ ಒಂದು ಸಲ ಮಾಡಿರುತ್ತಾರೆ. ಹಾಗೆಯೇ 'ಇವನು ನಂಗೆ ಲೈಕು ಹಾಕಲ್ಲಾ, ನಾನೇಕೆ ಹಾಕ್ಲಿ?' ಎಂದು ಲೈಕಿಸದೆ ಇರುವವರೂ ಬಹಳಷ್ಟು ಜನ ಇದ್ದಾರೆ ಎನ್ನುವುದೂ ವಾಸ್ತವ.

ಇಂತಹ ಪರಿಸ್ಥಿತಿ ಇರುವಾಗ ಈ ಲೈಕುಗಳದ್ದು ಮಿಥ್ಯಾಲೋಕವೆಂದರೆ ತಪ್ಪಲ್ಲ ತಾನೆ?